ಕಥೆ

# ಜೀವಾ



## ಮಂಜುನಾಥ್ ಚಾಂದ್

ಕಲೆ: ಮುರಳೀಧರ್ ರಾಥೋಡ್

ಆಕೆ ಇದ್ದಕ್ಕಿದ್ದಂತೆ ದಿಗಿಲಾದಳು. ತಾನು ಹೀಗೆ ಹಿಡಿದು ಕುಳಿತ ಅವನ ಕೈ ಯಾಕೆ ಇಷ್ಟೊಂದು ತಣ್ಣಗಾಗಿದೆ? 'ದಯಾ!'

'ದಯಾ, ದಯೂ... ದಯಾನಂದ... ನಂದೂ!'

ಅವನ ಕಿವಿಯೊಳಗೆ ಪಿಸುಗಟ್ಟಿದಳು. ಒಂದು ಸಣ್ಣ ಸ್ಪರ್ಶಕ್ಕೂ ಎದ್ದು ಬಿಡುವವ. ಯಾಕೆ ಹೀಗೆ ಗಾಢವಾದ ನಿದ್ದೆ? ಇದು ಚಿರನಿದ್ರೆಯಾ? ತಾನು ಹಿಡಿದ ಕೈಯನ್ನು ಆಕೆ ಒಂದಿನಿತೂ ಸಡಿಲಿಸಲಿಲ್ಲ. ಅದನ್ನು ಇನ್ನಷ್ಟು ಬಿಗಿಗೊಳಿಸಿದಳು. ಅದನ್ನು ಹಿಡಕೊಂಡೇ ಆ ತೆಳ್ಳನೆಯ ಕಂಬಳಿಯೊಳಗಿದ್ದ ಅವನ ಇನ್ನೊಂದು ಕೈಯನ್ನು ಮೆಲ್ಲನೆ ಎಳಕೊಂಡಳು.

ಅಯ್ಯೋ! ಅದೂ ತಣ್ಣಗೆ!

ಉಮ್, ಒಂದು ಕಣ್ಣಹನಿ ಪಟ್ಟಂತ ಚಿಮ್ಮಿತು. ಅದು ಕೆನ್ನೆಯಿಂದ ಜಾರಿ ಎದೆಯ ಗಾರಿನೊಳಗೆ ಇಳಿದು ಕರಗಿ ಹೋಯಿತು. ಹಾಗೇ ಹಿಡಿದ ಅವನ ಇನ್ನೊಂದು ಕೈಯನ್ನು ಕಂಬಳಿಯೊಳಗೆ ಬೆಚ್ಚಗಿರುವಂತೆ ಸುತ್ತಿದಳು. ಮಾಡಲೇನೀಗ... ಎಂಥಾ ಪರೀಕ್ಷೆ ನನಗಿದು? ಅವನ ಒಂದು ಕೈಯನ್ನು ಬಿಗಿಯಾಗಿ ಹಿಡಕೊಂಡೇ ತಬ್ಬಿಬ್ಬಾಗಿ ಎದ್ದು ನಿಂತಳು. ಸುತ್ತ ಕಣ್ಣಾಡಿಸಿದಳು. ಇಡೀ ಬಸ್ಸಿನಲ್ಲಿ ಕತ್ತಲು ಥಾಳಾಗಿ ಮಲಗಿತ್ತು. ಬರೀ ಉಸಿರುಗಳದ್ದೇ ಸಣ್ಣ ಸಣ್ಣ ಸದ್ದು. ಯಾರೊಬ್ಬರೂ ಕಣ್ಣರಳಿಸುತ್ತಿಲ್ಲ. ಒಮ್ಮೆ ಜೋರಾಗಿ ಕೂಗಿ ಬಿಡಲೇ? ಮಾರ್ಗದಲ್ಲೇ ಯಾವುದಾದರೂ ಆಸ್ಪತ್ರೆಗೆ ಕೊಂಡೊಯ್ಯುದ್ಬಿಡಲೇ? ಎಷ್ಟೀಗ ಗಂಟೆ? ಇವನಿಗೇನಾಯಿತು...

ಗಂಟೆ ಹನ್ನೊಂದು ಐವತ್ತೈದು.

ಈ ಬಸ್ಸು ಬೆಂಗಳೂರು ತಲುಪುವುದು ಬೆಳಗಿನ ಜಾವ. ಮತ್ತೆ ಹಾಗೇ ತನ್ನ ಸೀಟಿನಲ್ಲಿ ಕುಸಿದು ಕುಳಿತಳು. ಹಿಡಿದ ಕೈಯ ಬಿಗಿಯನ್ನು ಒಂದು ನೂಲಿನಷ್ಟೂ ಸಡಿಲಿಸಲಿಲ್ಲ. ತನ್ನ ಇನ್ನೊಂದು ಕೈಯನ್ನೂ ಅದರ ಸುತ್ತ ಬಿಗಿ ಹಿಡಿದು ಹಸ್ತವನ್ನು ಮೆಲ್ಲಗೆ ತಿಕ್ಕಿದಳು. ಮತ್ತೆ ಮತ್ತೆ ತಿಕ್ಕಿ ತೀಡಿದಳು. ಆತ ಕುಳಿತ ಸೀಟನ್ನು ನಿಧಾನಕ್ಕೆ ಹಿಮ್ಮುಖವಾಗಿ ಕೆಳಗೆ ಇಳಿಸಿದಳು. ಅದೇ ನೇರಕ್ಕೆ ತನ್ನ ಸೀಟನ್ನೂ ಇಳಿಸಿಕೊಂಡಳು. ಹಿಂದಿನ ಸೀಟಿನ ಕಡೆಗೆ ಕಣ್ಣಾಡಿಸಿದಳು. ಅಲ್ಲಿ ತನ್ನ ಅವಳಿ ಕುಡಿಗಳು ನಿದ್ದೆಗೆ ಜಾರಿದ್ದವು. ಒಮ್ಮೆ ಅವನ ಗಲ್ಲವನ್ನು ನಿಧಾನಕ್ಕೆ ಸ್ಪರ್ಶಿಸಿದಳು. ಉಫ್... ಅದೂ ತಣ್ಣಗೆ. ಬಾಯಿಗೆ ಬಾಯಿ ಕೊಟ್ಟು ಬಿಸಿಯುಸಿರು ತುಂಬಿದಳು.

ಮತ್ತೆ ಮತ್ತೆ. ಮತ್ತು ಮತ್ತೆ ಮತ್ತೆ. ತನ್ನ ತಿದಿ ಕಳಚಿಯೇ ಬರುವ ಹಾಗೆ. ಮಕ್ಕಳಿಗೆ ಎಚ್ಚರವಾಗಿ ಗಾಬರಿಗೊಂಡರೇ...

ಆತನ ಹಣೆಯ ಮೇಲಿನ ನಿರಿಗೆ ಒಂದಾದರೂ ಸರಿದೀತೆ ಎಂದು ಕಾದಳು. ಇಲ್ಲ. ಕದಲಿದಳು. ಅವನ ಟೀ ಶರ್ಟಿನ ಬಟನ್ ಸರಿಸಿ ಎದೆಯ ಮೇಲೆ ಮೂಗಿನಿಂದ ಉಜ್ಜಿದಳು. ಮತ್ತೆ ಮತ್ತೆ ಉಜ್ಜಿದಳು.